# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part –IVA | ಬೆಂಗಳೂರು, ಬುಧವಾರ, ೩೦, ಡಿಸೆಂಬರ್, ೨೦೨೦ ( ಮಾರ್ಗಶಿರ, ೦೯, ಶಕವರ್ಷ, ೧೯೪೨)<br>BENGALURU, WEDNESDAY, 30, DECEMBER, 2020 ( MARGASHIRA, 09, SHAKAVARSHA, 1942) | ನಂ. ೭೧೮<br>No. 718 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 43 ಶಾಸನ 2020, ಬೆಂಗಳೂರು, ದಿನಾಂಕ: 30.12.2020**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ವಿಧೇಯಕ, 2020 ಇದಕ್ಕೆ 2020 ರ ಡಿಸೆಂಬರ್ ತಿಂಗಳ 30ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020 ರ ಕರ್ನಾಟಕ ಅಧಿನಿಯಮ ಸಂಖ್ಯೆ:54 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

### 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 54

(2020 ರ ಡಿಸೆಂಬರ್ ತಿಂಗಳ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

### ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ. 2020

(2020ರ ಡಿಸೆಂಬರ್ ತಿಂಗಳ ಮೂವತ್ತನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 (2001ರ ಕರ್ನಾಟಕ ಅಧಿನಿಯಮ 29) ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಅಧಿನಿಯಮ, 2011ನ್ನು (2012ರ ಕರ್ನಾಟಕ ಅಧಿನಿಯಮ 11) ಮತ್ತಷ್ಟು ತಿದ್ದುಪಡಿ ಮಾಡಲು ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಒಂದು ಅಧಿನಿಯಮ;

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 (2001ರ ಕರ್ನಾಟಕ ಅಧಿನಿಯಮ 29) ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಅಧಿನಿಯಮ, 2011ನ್ನು (2012ರ ಕರ್ನಾಟಕ ಅಧಿನಿಯಮ 11) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) 2ನೇ ಪ್ರಕರಣದ (1)ನೇ ಉಪ ಪ್ರಕರಣ, (2)ನೇ ಉಪ ಪ್ರಕರಣದ (ಸಿ) ಖಂಡ, (4)ನೇ ಉಪ ಪ್ರಕರಣದ (ಡಿ) ಖಂಡ, (20)ನೇ ಉಪ ಪ್ರಕರಣ, (22)ನೇ ಉಪ ಪ್ರಕರಣ, (23)ನೇ ಉಪ ಪ್ರಕರಣದ (ii)ನೇ ಖಂಡ ಮತ್ತು (25)ನೇ ಉಪ ಪ್ರಕರಣವು 2001ರ ಸೆಪ್ಟೆಂಬರ್ 12ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು ಉಳಿದ ಉಪಬಂಧಗಳು 2020ರ ಜೂನ್ 19ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 2001ರ ಕರ್ನಾಟಕ ಅಧಿನಿಯಮ 29ರ ತಿದ್ದುಪಡಿ.-** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ರ (2001ರ ಕರ್ನಾಟಕ ಅಧಿನಿಯಮ 29).-

(1) 2ನೇ ಪ್ರಕರಣದಲ್ಲಿ,-

(ಎ) (1)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ.-

"(1-ಎ) "ಕರನಿರ್ಧರಣಾ ವರ್ಷ" ಎಂದರೆ ಯಾವ ಹಣಕಾಸು ವರ್ಷದಲ್ಲಿ ಆದಾಯದ ಕರ ನಿರ್ಧರಿಸಲಾಗಿದೆಯೋ ಅಥವಾ ತೆರಿಗೆ ವಿಧಿಸಲಾಗಿದೆಯೋ ಅದರ ಮುಂದಿನ ವರ್ಷ;"

(ಬಿ) (3)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ.-

"(3-ಎ) "ಹಣಕಾಸು ವರ್ಷ" ಎಂದರೆ, ಪ್ರತಿ ವರ್ಷದ ಏಪ್ರಿಲ್ 1ನೇ ದಿನದಿಂದ ಪ್ರಾರಂಭವಾದ ಹನ್ನೆರಡು ನಿರಂತರ ತಿಂಗಳುಗಳ ಅವಧಿ;"

(ಸಿ) (4)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(4ಎ) " ಹೊಸ ವಿಶ್ವವಿದ್ಯಾನಿಲಯ" ಎಂದರೆ ಮೂಲ ಅಧಿನಿಯಮದ ತಿದ್ದುಪಡಿಯ ಮೂಲಕ ರಾಜ್ಯ ಸರ್ಕಾರವು ಸ್ಥಾಪಿಸಿರುವ ವಿಶ್ವವಿದ್ಯಾನಿಲಯ."

(ಡಿ) (5)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ.-

"(5ಎ) "ಕಂಪನಿಯಲ್ಲಿ ಗಮನಾರ್ಹ ಹಿತಾಸಕ್ತಿಯನ್ನು ಹೊಂದಿರುವ ವ್ಯಕ್ತಿ" ಎಂಬುದು ಆದಾಯ ತೆರಿಗೆ ಅಧಿನಿಯಮ 1961ರ (ಇಲ್ಲಿ ಇನ್ನುಮುಂದೆ ಆದಾಯ ತೆರಿಗೆ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 13ನೇ ಪ್ರಕರಣದ (9)ನೇ ಉಪಪ್ರಕರಣದ ಕೆಳಗಿನ 3ನೇ ವಿವರಣೆಯಲ್ಲಿ ಈ ಪದಾವಳಿಗೆ ಗೊತ್ತುಪಡಿಸಿರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು.

(5ಬಿ) "ಹಿಂದಿನ ವಿಶ್ವವಿದ್ಯಾನಿಲಯ ಎಂದರೆ ಯಾವ ವಿಶ್ವವಿದ್ಯಾನಿಲಯದಿಂದ ಹೊಸ ವಿಶ್ವವಿದ್ಯಾನಿಲಯವನ್ನು ಸೃಜಿಸಲಾಗಿದೆ ಮತ್ತು ಸ್ಥಾಪಿಸಲಾಗಿದೆಯೋ ಅದು."

(5ಸಿ) "ಹಿಂದಿನ ವರ್ಷ" ಎಂದರೆ, ಕರ ನಿರ್ಧರಣೆ ವರ್ಷಕ್ಕೆ ನಿಕಟ ಪೂರ್ವದ ಹಣಕಾಸು ವರ್ಷ."

**(2)** 3ನೇ ಪ್ರಕರಣದಲ್ಲಿ,-

(ಎ) (1ಎಫ್) ಉಪಪ್ರಕರಣದಲ್ಲಿ,-

(i) "ಶಿವಾಜಿನಗರ" ಎಂಬ ಪದಕ್ಕೆ "ಶಿವಾಜಿನಗರ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(ii) "ಗೃಹವಿಜ್ಞಾನ ಸಂಸ್ಥೆ, ಬೆಂಗಳೂರು," ಎಂಬ ಪದಗಳ ತರುವಾಯ "ಸರ್ಕಾರಿ ವಿಜ್ಞಾನ ಕಾಲೇಜು (ಸ್ವಾಯತ್ತ), ನೃಪತುಂಗ ರಸ್ತೆ, ಬೆಂಗಳೂರು," ಎಂಬ ಪದಗಳು, ಆವರಣ ಚಿಹ್ನೆಗಳು ಮತ್ತು ಅಲ್ಪವಿರಾಮ ಚಿಹ್ನೆಗಳನ್ನು ಸೇರಿಸತಕ್ಕದ್ದು.

(ಬಿ) (1ಜೆ) ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಕೆ) ಬೆಂಗಳೂರಿನಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರುವ ಮತ್ತು ಸರ್ಕಾರಿ ವಿಜ್ಞಾನ ಕಾಲೇಜು (ಸ್ವಾಯತ್ತ), ನೃಪತುಂಗ ರಸ್ತೆ, ಬೆಂಗಳೂರು, ಇದರ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಏಕಾತ್ಮಕ ಸ್ವರೂಪದ ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದನ್ನು ಸ್ಥಾಪಿಸತಕ್ಕದ್ದು."

(ಸಿ) (4)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(4ಎ) ವಿಶ್ವವಿದ್ಯಾನಿಲಯದ ಸ್ಥಾಪನೆಯು ಲಾಭರಹಿತ ಸಂಸ್ಥೆಯಾಗಿರತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ಪೂರ್ಣ ಆದಾಯ ಮತ್ತು ಅದರ ಯಾವುದೇ ಭಾಗವನ್ನು ಅಥವಾ ಯಾವುದೇ ಸ್ಥಿರ ಅಥವಾ ಚರ ಸ್ವತ್ತನ್ನು ಯಾವೊಬ್ಬ ವ್ಯಕ್ತಿಗೆ ನೇರವಾಗಿ ಅಥವಾ ಪರೋಕ್ಷವಾಗಿ ವರ್ಗಾವಣೆ ಮಾಡತಕ್ಕದ್ದಲ್ಲ ಅಥವಾ ವಿಶ್ವವಿದ್ಯಾನಿಲಯದ ಪೂರ್ಣ ಆದಾಯ ಅಥವಾ ಅದರ ಭಾಗ ಅಥವಾ ಯಾವುದೇ ಸ್ಥಿರ ಅಥವಾ ಚರ ಸ್ವತ್ತಿನ ಮೇಲೆ ನೇರವಾಗಿ ಅಥವಾ ಪರೋಕ್ಷವಾಗಿ ಅಧಿಕಾರವನ್ನು ನೀಡುವ ಯಾವುದೇ ಹಕ್ಕನ್ನು ಯಾವೊಬ್ಬ ವ್ಯಕ್ತಿಗೆ ನೀಡತಕ್ಕದ್ದಲ್ಲ."

**(3)** 3ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**3ಎ. ವಿಶೇಷಾಧಿಕಾರಿಯ ನೇಮಕ.-** ಹೊಸ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ಮೂಲ ಅಧಿನಿಯಮವನ್ನು ತಿದ್ದುಪಡಿ ಮಾಡಿದಾಗಲೆಲ್ಲಾ, ಹೊಸ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಹಿರಿಯ ಶ್ರೇಣಿಯ ಗ್ರೂಪ್-ಎ ದರ್ಜೆಗೆ ಕಡಿಮೆಯಲ್ಲದ ಅಧಿಕಾರಿಯೊಬ್ಬರನ್ನು ವಿಶೇಷಾಧಿಕಾರಿಯೆಂದು ರಾಜ್ಯ ಸರ್ಕಾರವು ಆದೇಶದ ಮೂಲಕ ನೇಮಿಸಬಹುದು.

**3ಬಿ. ವಿಶೇಷಾಧಿಕಾರಿಯ ಅಧಿಕಾರಗಳು.-** ಮೂಲ ಅಧಿನಿಯಮದ ಅಡಿಯಲ್ಲಿ ಹೊಸ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ರಾಜ್ಯ ಸರ್ಕಾರವು ನೇಮಿಸಿದ ವಿಶೇಷಾಧಿಕಾರಿಯು, ಹೊಸ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ತಿದ್ದುಪಡಿ ಅಧಿನಿಯಮ ಪ್ರಾರಂಭದ ತರುವಾಯ, ಪ್ರಥಮ ಕುಲಪತಿಯ ನೇಮಕಾತಿಯವರೆಗೆ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ವಿಶ್ವವಿದ್ಯಾನಿಲಯದ ಮತ್ತು ಕುಲಪತಿಗಳ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು."

**(4)** 4ನೇ ಪ್ರಕರಣದಲ್ಲಿ,-

(ಎ) (i)ನೇ ಖಂಡದಲ್ಲಿ "(ಅಂಚೆ ತೆರಪಿನ ಮೂಲಕ ಶಿಕ್ಷಣವೂ ಸೇರಿದಂತೆ)" ಎಂಬ ಆವರಣ ಚಿಹ್ನೆಗಳು ಮತ್ತು ಪದಗಳಿಗೆ "(ಅಂಚೆ ತೆರಪಿನ ಮೂಲಕ ಶಿಕ್ಷಣವನ್ನು ಹೊರತುಪಡಿಸಿದಂತೆ)" ಎಂಬ ಆವರಣ ಚಿಹ್ನೆಗಳು ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) (viii)ನೇ ಖಂಡದಲ್ಲಿ ವಾಕ್ಯದ ಮೊದಲಿಗೆ "ಘಟಕ" ಎಂಬ ಪದವನ್ನು ಸೇರಿಸತಕ್ಕದ್ದು ಮತ್ತು "ಇತರ ಸಂಸ್ಥೆಗಳನ್ನು" ಎಂಬ ಪದಗಳ ತರುವಾಯ "ಸ್ಥಾಪಿಸುವುದು, " ಎಂಬ ಪದ ಮತ್ತು ಅಲ್ಪವಿರಾಮ ಚಿಹ್ನೆಯನ್ನು ಸೇರಿಸತಕ್ಕದ್ದು.

(ಸಿ) (xxiii)ನೇ ಖಂಡದಲ್ಲಿ ಎರಡನೇ ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು ಎಂದರೆ:-

"ಅಲ್ಲದೆ ಪರಂತು, (xix) ಮತ್ತು (xxii)ನೇ ಖಂಡದಲ್ಲಿ ಇರುವುದಾವುದೂ ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದಕ್ಕೆ ಅನ್ವಯವಾಗತಕ್ಕದಲ್ಲ ;" ಮತ್ತು

(ಡಿ) (xxiii)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"(xxiv) ವಿಶ್ವವಿದ್ಯಾಲಯವನ್ನು ಲಾಭರಹಿತ ಸಂಸ್ಥೆಯನ್ನಾಗಿಸುವ ಉದ್ದೇಶವನ್ನು ಅನುಸರಿಸಲು ಮತ್ತು ಪ್ರೋತ್ಸಾಹಿಸಲು ಅವಶ್ಯ ಅಥವಾ ಯುಕ್ತ ಕ್ರಮವನ್ನು ಕೈಗೊಳ್ಳುವುದು."

(5) 5ನೇ ಪ್ರಕರಣದಲ್ಲಿ,-

(ಎ) (1)ನೇ ಉಪಪ್ರಕರಣದಲ್ಲಿ,-

(i) ಮೊದಲನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು, ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಯಲವನ್ನು ಹೊರತುಪಡಿಸಿ ಯಾವುದೇ ವಿಶ್ವವಿದ್ಯಾನಿಲಯವು ವಿಶ್ವವಿದ್ಯಾನಿಲಯದ ಪ್ರದೇಶದೊಳಗೆ ಅಥವಾ ಹೊರಗೆ ಮುಕ್ತ ಮತ್ತು ದೂರ ಶಿಕ್ಷಣ ವಿಧಾನದಲ್ಲಿ ಯಾವುದೇ ಕಾರ್ಯಕ್ರಮವನ್ನು ನೀಡತಕ್ಕದ್ದಲ್ಲ."

(ii) ನಾಲ್ಕನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೇ ಪರಂತು, ಸಂಯೋಜನೆಗೆ ಸಂಬಂಧಿಸಿದಂತೆ, ಈ ಉಪಪ್ರಕರಣದಲ್ಲಿ ಇರುವುದಾವುದೂ, ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದಕ್ಕೆ ಅನ್ವಯವಾಗತಕ್ಕದ್ದಲ್ಲ."

(iii) (13)ನೇ ಉಪಪ್ರಕರಣದ ತುರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(14) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2020ರ ಪ್ರಾರಂಭಕ್ಕೆ ಮೊದಲು ಕರ್ನಾಟಕ ವಿಧಾನಸಭಾ ಕ್ಷೇತ್ರವಾದ ಶಿವಾಜಿನಗರದಲ್ಲಿ ಇರುವ ಸರ್ಕಾರಿ ವಿಜ್ಞಾನ ಕಾಲೇಜು (ಸ್ವಾಯತ್ತ), ನೃಪತುಂಗ ರಸ್ತೆ, ಬೆಂಗಳೂರು, ಇದು ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದಿಂದ ಅನುಭವಿಸುತ್ತಿರುವ ಯಾವುದೇ ವಿಶೇಷಾಧಿಕಾರವನ್ನು, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಈ ಹಿಂದೆ ಪ್ರವೇಶ ಪಡೆದುಕೊಂಡಿದ್ದ ಅಥವಾ ಸಂಯೋಜಿತವಾಗಿದ್ದ ಸರ್ಕಾರಿ ವಿಜ್ಞಾನ ಕಾಲೇಜು (ಸ್ವಾಯತ್ತ), ನೃಪತುಂಗ ರಸ್ತೆ, ಬೆಂಗಳೂರು ಇದು ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದರ ಘಟಕ ಕಾಲೇಜು ಅಥವಾ ವಿದ್ಯಾಲಯಗಳಾಗಿ ಸದರಿ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಪ್ರವೇಶ ಪಡೆದುಕೊಂಡಿವೆ ಎಂದು ಅಥವಾ ಅದಕ್ಕೆ ಸಂಯೋಜಿತವಾಗಿದೆ ಎಂದು ಭಾವಿಸತಕ್ಕದ್ದು."

(6) 5ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**5ಎ.ಕೆಲವು ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಉಳಿಸುವಿಕೆಗಳು.-** ಅಂಥ ತಿದ್ದುಪಡಿ ಅಧಿನಿಯಮವು ಪ್ರಾರಂಭವಾಗುವ ನಿಕಟಪೂರ್ವದಲ್ಲಿ ಹೊಸ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಅಥವಾ ಯಾವುದೇ ವಿಶ್ವವಿದ್ಯಾನಿಲಯದ ದೂರಶಿಕ್ಷಣವನ್ನು ಒಳಗೊಂಡು ಯಾವುದೇ ಶಿಕ್ಷಣ ಕೋರ್ಸನ್ನು ನಿಲ್ಲಿಸುವುದಕ್ಕೆ, ಮೂಲ ಅಧಿನಿಯಮ ಅಥವಾ ಅದರಡಿಯಲ್ಲಿ ಮಾಡಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳಲ್ಲಿ ಅಥವಾ ಮೂಲ ಅಧಿನಿಯಮಕ್ಕೆ ಮಾಡಿದ ಯಾವುದೇ ತಿದ್ದುಪಡಿಯಲ್ಲಿ ಏನೇ ಒಳಗೊಂಡಿದ್ದರೂ,-

(ಎ) ಜಾರಿಯಲ್ಲಿದ್ದ ಪರಿನಿಯಮಗಳಿಗೆ, ಆರ್ಡಿನೆನ್ಸ್‌ಗಳಿಗೆ, ವಿನಿಯಮಗಳಿಗೆ ಮತ್ತು ನಿಯಮಗಳಿಗೆ ಅನುಸಾರವಾಗಿ, ಹಿಂದಿನ ವಿಶ್ವವಿದ್ಯಾನಿಲಯದ ಪದವಿಗಾಗಿ ವ್ಯಾಸಂಗ ಮಾಡುತ್ತಿರುವ ಯಾವೊಬ್ಬ ವಿದ್ಯಾರ್ಥಿಗೆ, ಹೊಸ ವಿಶ್ವವಿದ್ಯಾನಿಲಯವು ಸಂದರ್ಭಾನುಸಾರವಾಗಿ

ಅಂಥ ಪರೀಕ್ಷೆಯನ್ನು ವ್ಯವಸ್ಥೆಗೊಳಿಸುವವರೆಗೆ, ಹಿಂದಿನ ವಿಶ್ವವಿದ್ಯಾನಿಲಯದ ಪರೀಕ್ಷೆಗೆ ಪ್ರವೇಶ ನೀಡತಕ್ಕದ್ದು ಮತ್ತು ಅಂಥ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಅವನು ಅರ್ಹನಾಗುವ ಪದವಿ ಅಥವಾ ಡಿಪ್ಲೋಮಾವನ್ನು ಅವನಿಗೆ ಪ್ರದಾನ ಮಾಡತಕ್ಕದ್ದು.

(ಬಿ) ಹಿಂದಿನ ವಿಶ್ವವಿದ್ಯಾನಿಲಯವು ಯಾವುದೇ ಪರೀಕ್ಷೆಯನ್ನು ನಡೆಸಿ ಅದರ ಫಲಿತಾಂಶವು ಪ್ರಕಟಿಸಿದ್ದು ಆದರೆ, ಅದಕ್ಕೆ ಸಂಬಂಧಪಟ್ಟ ಪದವಿ ಅಥವಾ ಡಿಪ್ಲೋಮಾವನ್ನು ಪ್ರದಾನ ಮಾಡಿರದಿದ್ದರೆ ಅಥವಾ ನೀಡಿರದಿದ್ದರೆ ಅಥವಾ ಯಾವುದೇ ಅಂಥ ಪರೀಕ್ಷೆಯ ಫಲಿತಾಂಶವನ್ನು ಹಿಂದಿನ ವಿಶ್ವವಿದ್ಯಾನಿಲಯವು ಪ್ರಕಟಿಸಿರದಿದ್ದರೆ, ಆಗ ಅಂಥ ಪರೀಕ್ಷೆಯನ್ನು ಹಿಂದಿನ ವಿಶ್ವವಿದ್ಯಾನಿಲಯವೇ ನಡೆಸಿದೆ ಎಂದು ಭಾವಿಸತಕ್ಕದ್ದು.

(7) 11ನೇ ಪ್ರಕರಣದ (ಎಮ್) ಖಂಡದ ಮೊದಲ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದರ ಸಂದರ್ಭದಲ್ಲಿ, ವಿಶ್ವವಿದ್ಯಾನಿಲಯಗಳ ಅಧಿಕಾರಿಗಳು (ಎಫ್) ಖಂಡವನ್ನು ಹೊರತುಪಡಿಸಿ ಮೇಲೆ ನಿರ್ದಿಷ್ಟಪಡಿಸಿದ ಅಧಿಕಾರಿಗಳೊಂದಿಗೆ ಹೆಚ್ಚುವರಿಯಾಗಿ ವಿದ್ಯಾಲಯಗಳ ನಿರ್ದೇಶಕರುಗಳನ್ನು ಸಹ ಒಳಗೊಳ್ಳತಕ್ಕದ್ದು."

(8) 14ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ,-

(ಎ) ಎಂಟನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೇ ಪರಂತು, ಈ ಪ್ರಕರಣದಲ್ಲಿ ವಿರುದ್ಧವಾದುದು ಏನೇ ಇದ್ದರೂ, ರಾಜ್ಯ ಸರ್ಕಾರವು, ತಾನು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಮಂಡ್ಯ ವಿಶ್ವವಿದ್ಯಾನಿಲಯ, ಮಂಡ್ಯ ಇವುಗಳ ಪ್ರಥಮ ಕುಲಪತಿಯವರನ್ನು ನೇಮಕ ಮಾಡತಕ್ಕದ್ದು."

(ಬಿ) ಒಂಬತ್ತನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೇ ಪರಂತು, ಈ ಪ್ರಕರಣದಲ್ಲಿ ವಿರುದ್ಧವಾದುದು ಏನೇ ಇದ್ದರೂ, ರಾಜ್ಯ ಸರ್ಕಾರವು, ತಾನು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2020 ಪ್ರಾರಂಭವಾದ ತರುವಾಯ ಮೂಲ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ಯಾವುದೇ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಯವರನ್ನು ನೇಮಕ ಮಾಡತಕ್ಕದ್ದು."

(9) 14ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"14ಎ. ಪ್ರಥಮ ಕುಲಪತಿಯ ಕರ್ತವ್ಯಗಳು.-** (1) ವಿಶ್ವವಿದ್ಯಾನಿಯಲಯದ ಸ್ಥಾಪನೆಯ ದಿನಾಂಕದಿಂದ ಆರು ತಿಂಗಳೊಳಗೆ ಅಥವಾ ಕುಲಾಧಿಪತಿಯು ನಿರ್ದೇಶಿಸಬಹುದಾದ ಒಂದು ವರ್ಷಕ್ಕೂ ಮೀರದ ಅಂಥ ದೀರ್ಘಾವಧಿಯೊಳಗೆ ಹೊಸ ವಿಶ್ವವಿದ್ಯಾನಿಲಯದ ಸಿಂಡಿಕೇಟ್, ವಿದ್ಯಾ ವಿಷಯಕ ಪರಿಷತ್ತು ಮತ್ತು ಇತರ ಪ್ರಾಧಿಕಾರಗಳನ್ನು ರಚಿಸುವುದಕ್ಕಾಗಿ ವ್ಯವಸ್ಥೆಗಳನ್ನು ಮಾಡುವುದು ಪ್ರಥಮ ಕುಲಪತಿಯ ಕರ್ತವ್ಯವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ರಚಿಸಲಾದ ಪ್ರಾಧಿಕಾರಗಳು, ಈ ಬಗ್ಗೆ, ಕುಲಾಧಿಪತಿಯವರು ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಅವುಗಳು ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಪ್ರಾರಂಭಿಸತಕ್ಕದ್ದು.

**14ಬಿ. ಹೊಸ ವಿಶ್ವವಿದ್ಯಾನಿಯಲದ ಸ್ಥಾಪನೆಯ ಮೇರೆಗೆ ತಾತ್ಕಾಲಿಕ ಉಪಬಂಧಗಳು.-** (1) ಮೂಲ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಪ್ರಥಮ ಕುಲಪತಿಯವರು ಕುಲಾಧಿಪತಿಯವರ ಪೂರ್ವಾನುಮೋದನೆಯೊಂದಿಗೆ ಸಂದರ್ಭಾನುಸಾರವಾಗಿ, ತಿದ್ದುಪಡಿ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಹೊಸ ವಿಶ್ವವಿದ್ಯಾನಿಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು ಮತ್ತು ಆ ಉದ್ದೇಶಕ್ಕಾಗಿ, ಮೂಲ ಅಧಿನಿಯಮದ ಮೂಲಕ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರವು ಚಲಾಯಿಸಬೇಕಾದ ಅಥವಾ ನಿರ್ವಹಿಸಬೇಕಾದ ಯಾವುದೇ ಅಧಿಕಾರವನ್ನು ಅಥವಾ ಯಾವುದೇ ಕರ್ತವ್ಯವನ್ನು ತಿದ್ದುಪಡಿ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಅಂಥ ಪ್ರಾಧಿಕಾರವು ಅಸ್ತಿತ್ವಕ್ಕೆ ಬರುವವರೆಗೆ ಚಲಾಯಿಸಬಹುದು ಅಥವಾ ನೆರವೇರಿಸಬಹುದು.

(2) ಮೂಲ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ಹೊಸ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಅಥವಾ ಇತರ ಶಿಕ್ಷಣ ಸಂಸ್ಥೆಗಳಿಗೆ ಅನ್ವಯವಾಗತಕ್ಕ, ಹಿಂದಿನ ವಿಶ್ವವಿದ್ಯಾನಿಲಯವು ರಚಿಸಿದ ಎಲ್ಲ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳನ್ನು ಹೊಸ ವಿಶ್ವವಿದ್ಯಾಲಯವು ಸಂದರ್ಭಾನುಸಾರವಾಗಿ ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳೆಂದು ಭಾವಿಸತಕ್ಕದ್ದು ಮತ್ತು ಅವು ಹೊಸ ವಿಶ್ವವಿದ್ಯಾನಿಲಯವು ತನ್ನದೇ ಆದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳನ್ನು ರಚಿಸುವವರೆಗೆ ಹಾಗೆಯೇ ಮುಂದುವರಿಯತಕ್ಕದ್ದು:

ಪರಂತು,ಕುಲಪತಿಯವರು, ಕುಲಾಧಿಪತಿಯವರ ಅನುಮೋದನೆಯೊಂದಿಗೆ, ತಾವು ಅವಶ್ಯಕವೆಂದು ಪರಿಗಣಿಸಬಹುದಾದಂಥ ಮಾರ್ಪಾಡುಗಳನ್ನು ಅಥವಾ ಅಳವಡಿಕೆಗಳನ್ನು ಅದರಲ್ಲಿ ಮಾಡಬಹುದು."

(10) 17ನೇ ಪ್ರಕರಣದ (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ರಿಜಿಸ್ಟ್ರಾರ್‌ರವರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ರಾಜ್ಯ ಸರ್ಕಾರವು, ಅಖಿಲ ಭಾರತ ಸೇವೆಗೆ ಸೇರಿದ ಒಬ್ಬ ಅಧಿಕಾರಿಯನ್ನು ಅಥವಾ ಕರ್ನಾಟಕ ಆಡಳಿತ ಸೇವೆಗೆ ಸೇರಿದ ಹಿರಿಯ ಶ್ರೇಣಿಯ ಗ್ರೂಪ್ 'ಎ' ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಮತ್ತು ಮೇಲಿನ ಒಬ್ಬ ಅಧಿಕಾರಿಯನ್ನು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್‌ರನ್ನಾಗಿ ನೇಮಕ ಮಾಡಬಹುದು."

(11) 19ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಲೆಕ್ಕಪರಿಶೋಧನೆ, ಲೆಕ್ಕಪತ್ರನಿರ್ವಹಣೆ ಮತ್ತು ಹಣಕಾಸು ಆಡಳಿತದಲ್ಲಿ ಅನುಭವವನ್ನು ಹೊಂದಿರುವ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಜಂಟಿ ನಿಯಂತ್ರಕರ ವೃಂದದ ಅಧಿಕಾರಿಗಳಾಗಿರುವ ಅಥವಾ ಉಪ ಮಹಾಲೇಖಪಾಲರ ದರ್ಜೆಯ ಅಧಿಕಾರಿಗಳಾಗಿರುವ ವ್ಯಕ್ತಿಗಳಿಂದ ಪೈಕಿ ರಾಜ್ಯ ಸರ್ಕಾರದ ಮೂಲಕ ನೇಮಕವಾಗುವ ಹಣಕಾಸು ಅಧಿಕಾರಿಯು ವಿಶ್ವವಿದ್ಯಾನಿಯಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಕಾಲಾವಧಿಯೊಳಗಾಗಿ ಯಾವೊಬ್ಬ ವ್ಯಕ್ತಿಯನ್ನು ನೇಮಕ ಮಾಡಲಾಗದಿದ್ದಲ್ಲಿ, ಕುಲಾಧಿಪತಿಯವರು ರಾಜ್ಯ ಸರ್ಕಾರದ ಸಮಾಲೋಚನೆಯೊಂದಿಗೆ, ಅವರು

ಸೂಕ್ತವೆಂದು ಭಾವಿಸುವ ಅಂಥ ಇತರ ವ್ಯಕ್ತಿಯನ್ನು ಹಣಕಾಸು ಅಧಿಕಾರಿಯನ್ನಾಗಿ ನೇಮಿಸಬಹುದು.

(ii) (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಹಣಕಾಸು ಅಧಿಕಾರಿಯ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು ಮತ್ತು ಹಣಕಾಸು ಅಧಿಕಾರಿಯ ಉಪಲಬ್ಧಗಳು ಹಾಗೂ ಇತರ ನಿಬಂಧನೆಗಳು ಮತ್ತು ಷರತ್ತುಗಳು ಪರಿನಿಯಮಗಳಲ್ಲಿ ನಿಯಮಿಸಬಹುದಾದಂತೆ ಇರತಕ್ಕದ್ದು."

(12) 21ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದ ನಾಲ್ಕನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು, ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದಕ್ಕೆ ಸಂಬಂಧಿಸಿದಂತೆ ಡೀನ್‌ರನ್ನು ವಿದ್ಯಾಲಯಗಳ ನಿರ್ದೇಶಕರು ಎಂದು ಹಾಗೂ ವ್ಯಾಸಂಗ ವಿಭಾಗವನ್ನು ವಿದ್ಯಾಲಯಗಳು ಎಂಬುದಾಗಿ ಕರೆಯತಕ್ಕದ್ದು."

(13) 28ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಮೂರನೇ ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದರ ಸಂದರ್ಭದಲ್ಲಿ ಸಿಂಡಿಕೇಟು, ಮೇಲೆ (ಬಿ), (ಸಿ), (ಡಿ), (ಎಫ್), (ಐ), (ಜೆ) ಮತ್ತು (ಕೆ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಸದಸ್ಯರನ್ನು ಒಳಗೊಳ್ಳತಕ್ಕದ್ದಲ್ಲ ಆದರೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅಥವಾ ಸರ್ಕಾರದ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ಅವರ ನಾಮ ನಿರ್ದೇಶಿತರು, ಜ್ಯೇಷ್ಠತೆಯ ಆಧಾರದಲ್ಲಿ ಸರದಿಯ ಮೇರೆಗೆ ಒಂದು ವರ್ಷದ ಅವಧಿಯವರೆಗೆ ಕುಲಪತಿಯು ನಾಮನಿರ್ದೇಶಿಸಿದ ವಿದ್ಯಾಲಯಗಳ ಇಬ್ಬರು ನಿರ್ದೇಶಕರನ್ನು ಒಳಗೊಳ್ಳತಕ್ಕದ್ದು."

(14) 29ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ (ಡಬ್ಲ್ಯೂ) ಖಂಡದಲ್ಲಿನ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, (ಜೆ) ಖಂಡದ ಉಪಬಂಧಗಳು ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದರ ಸಂದರ್ಭದಲ್ಲಿ ಅನ್ವಯವಾಗತಕ್ಕದ್ದಲ್ಲ."

(15) 30ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ ಮೂರನೇ ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೇ ಪರಂತು, ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದರ ಸಂದರ್ಭದಲ್ಲಿ ವಿದ್ಯಾವಿಷಯಕ ಪರಿಷತ್ತು, (vi), (ix)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಸದಸ್ಯರನ್ನು ಒಳಗೊಳ್ಳತಕ್ಕದ್ದಲ್ಲ, ಆದರೆ ಜೇಷ್ಠತೆಯ ಆಧಾರದಲ್ಲಿ ಸರದಿಯ ಮೇರೆಗೆ ಪ್ರತಿ ಎರಡು ವರ್ಷದ ಅವಧಿಯವರೆಗೆ ಕುಲಪತಿಯು ನಾಮನಿರ್ದೇಶಿಸಿದ ವಿದ್ಯಾಲಯಗಳ ಐವರು ನಿರ್ದೇಶಕರುಗಳನ್ನು ಒಳಗೊಳ್ಳತಕ್ಕದ್ದು."

(16) 31ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿನ (xx)ನೇ ಖಂಡದಲ್ಲಿ ಮೊದಲನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದರ ಸಂದರ್ಭದಲ್ಲಿ ಸಂಯೋಜನೆಗೆ ಸಂಬಂಧಿತ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ."

(17) 34ನೇ ಪ್ರಕರಣದಲ್ಲಿನ (11)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(12) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದರ ಸಂದರ್ಭದಲ್ಲಿ ವ್ಯಾಸಂಗ ವಿಭಾಗವನ್ನು ವಿದ್ಯಾಲಯಗಳು ಎಂದು ಹಾಗೂ ಡೀನರುಗಳನ್ನು ವಿದ್ಯಾಲಯಗಳ ನಿರ್ದೇಶಕರುಗಳೆಂದು ಕರೆಯತಕ್ಕದ್ದು."

(18) 36ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಮೊದಲನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದರ ಸಂದರ್ಭದಲ್ಲಿ ಮೇಲೆ ನಿರ್ದಿಷ್ಟಪಡಿಸಿದ (iii), (v) ಮತ್ತು (vi)ನೇ ಖಂಡಗಳನ್ನು ಹೊರತುಪಡಿಸಿ (i), (ii) ಮತ್ತು (iv)ನೇ ಖಂಡಗಳಿಗೆ ಹೆಚ್ಚುವರಿಯಾಗಿ ಕುಲಪತಿಯು ನಾಮನಿರ್ದೇಶಿಸಿದ ವಿದ್ಯಾಲಯಗಳಲ್ಲಿ ಸಂಬಂಧಿತ ಅಧ್ಯಯನಗಳ ವಿಭಾಗದೊಳಗೆ ವಿಷಯಗಳನ್ನು ಬೋಧಿಸುವ ಇಬ್ಬರು ಅಧ್ಯಾಪಕರನ್ನು ಒಳಗೊಳ್ಳತಕ್ಕದ್ದು."

(19) 40ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(i) (ಎಸ್) ಖಂಡದಲ್ಲಿ "ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯದ" ಎಂಬ ಪದಗಳಿಗೆ "ಮಂಡ್ಯ ವಿಶ್ವವಿದ್ಯಾನಿಲಯ, ಮಂಡ್ಯ ಅಥವಾ ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು ಇದರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (ಟಿ) ಖಂಡದಲ್ಲಿ "ಮಂಡ್ಯ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾನಿಲಯವನ್ನು" ಎಂಬ ಪದಗಳಿಗೆ "ಮಂಡ್ಯ ವಿಶ್ವವಿದ್ಯಾನಿಲಯ, ಮಂಡ್ಯ ಅಥವಾ ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು ಇದನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) (ಟಿ) ಖಂಡದಲ್ಲಿ ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು ಇದರ ಸಂದರ್ಭದಲ್ಲಿ (ಜಿ) ಖಂಡವು ಅನ್ವಯವಾಗತಕ್ಕದ್ದಲ್ಲ. "

(20) 41ನೇ ಪ್ರಕರಣದ (7)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು.-

"(8) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಸಿಂಡಿಕೇಟ್, ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳಿಗೆ ಪರಿಣಾಮ ಉಂಟುಮಾಡುವ ಯಾವುದೇ ಹೊಸ ಪರಿನಿಯಮವನ್ನು ಮಾಡತಕ್ಕದ್ದಲ್ಲ ಅಥವಾ ಅಳವಡಿಸತಕ್ಕದ್ದಲ್ಲ ಅಥವಾ ಯಾವುವೇ ಪರಿನಿಯಮಗಳನ್ನು ತಿದ್ದುಪಡಿ ಮಾಡತಕ್ಕದ್ದಲ್ಲ, ಮಾರ್ಪಡಿಸತಕ್ಕದ್ದಲ್ಲ ಅಥವಾ ನಿರಸನಗೊಳಿಸತಕ್ಕದ್ದಲ್ಲ. "

(21) 42ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ಎನ್) ಖಂಡದ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದರ ಸಂದರ್ಭದಲ್ಲಿ (ಜಿ) ಖಂಡವು ಅನ್ವಯವಾಗತಕ್ಕದ್ದಲ್ಲ."

(22) 46ನೇ ಪ್ರಕರಣದ (3)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

" (4) ವಿಶ್ವವಿದ್ಯಾನಿಲಯದ ಆದಾಯದ ಯಾವುದೇ ಭಾಗವನ್ನು, ವಿಶ್ವವಿದ್ಯಾನಿಲಯದ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರ ಅಥವಾ ಅದಕ್ಕೆ ಗಣನೀಯವಾದ ಕೊಡುಗೆಯನ್ನು ನೀಡಿರುವ ಯಾವೊಬ್ಬ ಇತರ ವ್ಯಕ್ತಿಯ ಅಥವಾ ಅಂಥ ಅಧಿಕಾರಿ ಅಥವಾ ಪ್ರಾಧಿಕಾರ ಅಥವಾ ವ್ಯಕ್ತಿಯ ಯಾವೊಬ್ಬ ಸಂಬಂಧಿ ಅಥವಾ ಅಂಥ ಅಧಿಕಾರಿ ಅಥವಾ ಪ್ರಾಧಿಕಾರ ಅಥವಾ ವ್ಯಕ್ತಿ ಅಥವಾ ಅಂಥ ಅಧಿಕಾರಿ ಅಥವಾ ಪ್ರಾಧಿಕಾರ ಅಥವಾ ವ್ಯಕ್ತಿಯ ಸಂಬಂಧಿಯು ಗಣನೀಯ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ಸಂಸ್ಥೆಯ ಪ್ರಯೋಜನಕ್ಕಾಗಿ ನೇರವಾಗಿ ಅಥವಾ ಪರೋಕ್ಷವಾಗಿ ಬಳಸಿಕೊಳ್ಳತಕ್ಕದ್ದಲ್ಲ. "

(23) 47ನೇ ಪ್ರಕರಣದಲ್ಲಿ,-

(i) (3)ನೇ ಉಪಪ್ರಕರಣದಲ್ಲಿ "ರಾಜ್ಯ ಲೆಕ್ಕಪತ್ರ ನಿಯಂತ್ರಕನು" ಎಂಬ ಪದಗಳಿಗೆ "ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (4)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(5) ವಿಶ್ವವಿದ್ಯಾನಿಲಯವು, ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) 11 ಮತ್ತು 12ನೇ ಪ್ರಕರಣಗಳ ಉಪಬಂಧಗಳನ್ನು ಜಾರಿಗೊಳಿಸದೇ ಆ ಅಧಿನಿಯಮದ ಅಡಿಯಲ್ಲಿ ಲೆಕ್ಕಮಾಡಿದಂತೆ ತನ್ನ ಒಟ್ಟು ಆದಾಯವು ಹಿಂದಿನ ಯಾವುದೇ ವರ್ಷದಲ್ಲಿನ ಆದಾಯತೆರಿಗೆಗೆ ಚಾರ್ಜು ಮಾಡದಿರುವ ಗರಿಷ್ಠ ಮೊತ್ತವನ್ನು ಮೀರಿದ್ದಲ್ಲಿ, ಆದಾಯ ತೆರಿಗೆ ಅಧಿನಿಯಮ, 1961ರ 288ನೇ ಪ್ರಕರಣದ (2)ನೇ ಉಪಪ್ರಕರಣದ ವಿವರಣೆಯಲ್ಲಿ ಪರಿಭಾಷಿಸಿದಂತೆ ಒಬ್ಬ ಅಕೌಂಟೆಂಟ್‌ನ ಮೂಲಕ ಆ ವರ್ಷದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು ಮತ್ತು ಸಂಬಂಧಪಟ್ಟ ಮೌಲ್ಯಮಾಪನ ವರ್ಷಕ್ಕಾಗಿನ ಆದಾಯದ ತನ್ನ ರಿಟರ್ನ್‌ಗಳೊಂದಿಗೆ, ಅಂಥ ಅಕೌಂಟೆಂಟಿನ ಮೂಲಕ ಯುಕ್ತವಾದ ಸಹಿ ಮಾಡಿರುವ ಮತ್ತು ಪರಿಶೀಲಿಸಿರುವ ನಿಯಮಿಸಲಾದ ನಮೂನೆಯಲ್ಲಿ ಅಂಥ ಲೆಕ್ಕಪರಿಶೋಧನೆಯ ವರದಿಯನ್ನು ಮತ್ತು ಆದಾಯ ತೆರಿಗೆ ಅಧಿನಿಯಮ, 1961ರ 12ಎ ಪ್ರಕರಣದ (1)ನೇ ಉಪಪ್ರಕರಣದ (ಬಿ) ಮತ್ತು (ಬಿಎ) ಖಂಡಗಳಿಗೆ ಅನುಸಾರವಾಗಿ ನಿಯಮಿಸಬಹುದಾದ ಅಂಥ ವಿವರಗಳನ್ನು ನಮೂದಿಸಿ ಸಲ್ಲಿಸತಕ್ಕದ್ದು.

(6) ವಿಶ್ವವಿದ್ಯಾನಿಲಯವು ತನ್ನ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಮಾತ್ರ ತನ್ನ ಆದಾಯವನ್ನು ಮತ್ತು ಚರ ಮತ್ತು ಸ್ಥಿರ ಸ್ವತ್ತನ್ನು ಉಪಯೋಗಿಸಿಕೊಳ್ಳತಕ್ಕದ್ದು, ಆದಾಯ ತೆರಿಗೆ ಅಧಿನಿಯಮ, 1961ರ 11ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ನಮೂನೆ ಅಥವಾ ವಿಧಾನವನ್ನು ಹೊರತು ಪಡಿಸಿ ಭಾರತದಲ್ಲಿನ ಧರ್ಮಾರ್ಥ ಉದ್ದೇಶಗಳಿಗಾಗಿ ಅನ್ವಯಿಸಲು ಹೂಡಿಕೆ ಅಥವಾ ಯಾವುದೇ ಸಂಚಿತ ಆದಾಯದ ಠೇವಣಿ ಮಾಡತಕ್ಕದ್ದಲ್ಲ ಅಥವಾ ಮೀಸಲಿಡತಕ್ಕದ್ದಲ್ಲ ಮತ್ತು ಲಾಭದರೂಪದಲ್ಲಿ ಲಾಭಾಂಶ ಮತ್ತು ಬಡ್ಡಿಯನ್ನು ಅಥವಾ ಯಾವುದೇ ಇತರ ರೀತಿಯಲ್ಲಿ ಯಾವುದೇ ವ್ಯಕ್ತಿಗೆ ತನ್ನ ಆದಾಯ ಅಥವಾ ಸ್ವತ್ತನ್ನು ವಿತರಣೆ ಮಾಡತಕ್ಕದ್ದಲ್ಲ."

(24) 58ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"58ಬಿ. 59 ರಿಂದ 67ನೇ ಪ್ರಕರಣದ ಉಪಬಂಧಗಳ ಅನ್ವಯ.-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, 59 ರಿಂದ 67ನೇ ಪ್ರಕರಣದ ಉಪಬಂಧಗಳು ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು, ಇದಕ್ಕೆ ಅನ್ವಯವಾಗತಕ್ಕದ್ದಲ್ಲ."

(25) 84ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"84ಎ. ವಿಶ್ವವಿದ್ಯಾನಿಲಯವನ್ನು ಸಮಾಪನಗೊಳಿಸುವುದು (dissolution) ಅಥವಾ ಪರಿಸಮಾಪನಗೊಳಿಸುವುದು (winding up).-** ವಿಶ್ವವಿದ್ಯಾನಿಲಯದ ಸಮಾಪನ ಅಥವಾ ಪರಿಸಮಾಪನದ ಸಂದರ್ಭದಲ್ಲಿ, ಸಮಾಪನೆಯ ದಿನಾಂಕದಂದು ಉಳಿದಿರುವ ಆಸ್ತಿಗಳು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಅಥವಾ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಅಥವಾ ಹಣಕಾಸು ಸಮಿತಿ ಅಥವಾ ಗಣನೀಯ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ವ್ಯಕ್ತಿ ಅಥವಾ ತಮ್ಮ ಸಂಬಂಧಿಗಳ ಪೈಕಿ, ಯಾವುದೇ ಸನ್ನಿವೇಶಗಳಲ್ಲಿ ವಿತರಣೆಮಾಡತಕ್ಕದ್ದಲ್ಲ, ಆದರೆ ಅದನ್ನು ಈ ವಿಶ್ವವಿದ್ಯಾನಿಲಯದ ಅಂಥದೇ ಸ್ವರೂಪದ ಉದ್ದೇಶಗಳಿರುವ ಮತ್ತೊಂದು ವಿಶ್ವವಿದ್ಯಾನಿಲಯಕ್ಕೆ ಅದನ್ನು ವರ್ಗಾಯಿಸತಕ್ಕದ್ದು".

**(26) ಪದಾವಳಿಯ ಪ್ರತಿಯೋಜನೆ.-**"ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ" ಎಂಬ ಪದಗಳು ಬರುವೆಡೆಗಳಲ್ಲೆಲ್ಲಾ "ಬೆಂಗಳೂರು ನಗರ ವಿಶ್ವವಿದ್ಯಾನಿಲಯ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 2012ರ ಕರ್ನಾಟಕ ಅಧಿನಿಯಮ 11ರ ತಿದ್ದುಪಡಿ.-** ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, 2011ರ (2012ರ ಕರ್ನಾಟಕ ಅಧಿನಿಯಮ 11), 46ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ, "ರಾಜ್ಯ ಲೆಕ್ಕಪತ್ರ ನಿಯಂತ್ರಕರು" ಎಂಬ ಪದಗಳಿಗೆ "ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಇವರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. ತೊಂದರೆಗಳ ನಿವಾರಣೆ.-** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2020ರ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2020ರ ಉಪಬಂಧಗಳಿಗೆ ಅಸಂಗತವಾಗದ, ತನಗೆ ಅವಶ್ಯವೆಂದು ಅಥವಾ ಯುಕ್ತವೆಂದು ಕಂಡುಬರಬಹುದಾದಂಥ ಉಪಬಂಧವನ್ನು ರಚಿಸಬಹುದು:

ಪರಂತು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2020ರ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಯಾವುದೇ ಅಂಥ ಆದೇಶಗಳನ್ನು ಮಾಡತಕ್ಕದ್ದಲ್ಲ.

**'5. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ 22) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ

ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

## PARLIAMENTARY AFFAIRS AND LEGISLATION SECRETARIAT

## NOTIFICATION

**No. DPAL 43 SHASANA 2020, BENGALURU, Dated: 30.12.2020**

Ordered that the translation of ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2020 (2020 ರ ಕರ್ನಾಟಕ ಅಧಿನಿಯಮ ಸಂಖ್ಯೆ:54) in English language, be published as authoritative text as required by clause (3) of Article 348 of the Constitution of India in the Karnataka Gazette extra-ordinary for general information.

The following translation of ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2020 (2020 ರ ಕರ್ನಾಟಕ ಅಧಿನಿಯಮ ಸಂಖ್ಯೆ:54) in English language, is published in the Official Gazette under the authority of the Governor of Karnataka under clause (3) of Article 348 of the Constitution of India.

## KARNATAKA ACT NO. 54 OF 2020

**(First Published in the Karnataka Gazette Extra-ordinary on the thirtieth day of December 2020)**

## THE KARNATAKA STATE UNIVERSITIES AND CERTAIN OTHER LAW (SECOND AMENDMENT) ACT, 2020

**(Received the assent of the Governor on the thirtieth day of December 2020)**

An Act further to amend the Karnataka State Universities Act, 2000 (Karnataka Act 29 of 2001) and the Karnataka Janapada Vishwavidyalaya Act, 2011 (Karnataka Act 11 of 2012) and for matters connected therewith or incidental thereto;

Whereas it is expedient further to amend the Karnataka State Universities Act, 2000 (Karnataka Act 29 of 2001) and the Karnataka Janapada

Vishwavidyalaya Act, 2011 (Karnataka Act 11 of 2012), for the purpose hereinafter appearing.

Be it enacted by Karnataka State Legislature in the seventy first year of the Republic of India, as follows:-

**1. Short title and Commencement.**-(1) This Act may be called the Karnataka State Universities and certain other law (Second Amendment) Act, 2020.

(2) sub-section (1), clause (c) of sub-section (2), clause (d) of sub-section (4), sub-section (20), sub-section (22), clause (ii) of sub-section (23) and sub-section (25) of Section 2, shall be deemed to have come into force with effect from the 12th day of September, 2001 and remaining provisions shall come into force with effect from the 19th day of June, 2020.

**2. Amendment of Karnataka Act 29 of 2001.**- In the Karnataka State Universities Act, 2000 (Karnataka Act 29 of 2001),-

**(1)** in section 2,-

(a) after clause (1), the following shall be inserted, namely:-

"(1-a) "Assessment Year" means the year following the year in which the income of a financial year is assessed or taxed";

(b) after clause (3), the following shall be inserted, namely:-

"(3-a) "Financial Year" means a period of twelve consecutive months commencing on 1st day of April every year";

(c) after clause (4), the following shall be inserted, namely:-

"(4-a)"New university" means the university established by the State Government by an amendment of the Principal Act."

(d) after clause (5), the following shall be inserted, namely:-

"(5-a) "person having a substantial interest in a concern" shall have the same meaning as assigned to this expression in explanation 3 below sub-section (9) of section 13 of the Income Tax Act, 1961(hereinafter referred to as the Income Tax Act);

(5-b) "Previous university" means the university from which new university is carved out and established.

(5-c) "Previous Year" means the financial year immediately preceding the assessment year;"

**(2)** In section 3,-

(a) in sub-section (1F),-

(i) for the word "Shivajinagar", the words "Shivaji Nagara", shall be substituted;

(ii) after the words "Home Science, Bengaluru", the words and brackets "and except Government Science College (Autonomous), Nrupathunga Road, Bengaluru" shall be inserted;

(b) after sub-section (1J), the following shall be inserted, namely:-

"(1K) There shall be established the Nrupathunga University, Bengaluru of unitary in nature with headquarters at Bengaluru and territorial jurisdiction extending over the Government Science College (Autonomous), Nrupathunga Road, Bengaluru."

(c) after sub-section(4), the following shall be inserted, namely:-

"(4-a) The establishment of the University shall be a non-profit making institution and the University shall not transfer directly or indirectly of the whole or any part of income or of any movable or immovable property of the university to any person or to give any person any right to assume power directly or indirectly over the whole or any part of the income or of any movable or immovable property of the University".

**(3)** After section 3, the following shall be inserted, namely.-

"**3A. Appointment of special officer.**-Whenever principal Act is amended for the establishment of the new university, the Government may by order, appoint an officer not below the rank of group A officer of the senior scale as special officer for taking steps to establish the new university.

**3B. Powers of special officer.**-The Special officer appointed by the State Government for the purpose of taking steps to establish the new University under the principal Act, after the commencement of the Amendment Act for establishment of new university, shall exercise such powers and perform such functions of the University and the Vice-Chancellors as may be specified by the State Government, until the first Vice-Chancellor is appointed."

**(4)** In section 4,-

(a) in clause (i), for the words and brackets "(including instruction by correspondence)", the words and brackets "(excluding instruction by correspondence)" shall be substituted;

(b) in clause (viii), for the words "to maintain and administer", the words "to establish, maintain and administer constituent" shall be substituted;

(c) in clause (xxiii), after the second proviso, the following proviso shall be inserted, namely:-

"Provided also that, nothing in clause (xix) and (xxii) shall apply to the Nrupathunga University, Bengaluru.";and

(d) after clause (xxiii), the following shall be inserted, namely:-

"(xxiv) Undertake necessary or expedient action to pursue and promote the objective of the University as a non-profit organization."

**(5)** In section 5,-

(a) in sub-section(1),-

(i) for the first proviso, the following shall be substituted, namely:-

"Provided that no University except Karnataka State Open University shall offer the programme in Open and Distance Learning mode within or outside the University area";

(ii) after fourth proviso, the following shall be inserted, namely:-

"Provided also that, nothing in this sub-section pertaining to affiliation shall be applicable to the Nrupathunga University, Bengaluru."

(iii) after sub-section (13), the following shall be inserted, namely:-

"(14) Any privilege enjoyed from the Bengaluru Central University by the Government Science College (Autonomous), Nrupathunga Road, Bengaluru, situated in the Karnataka Legislative Assembly Constituency of Shivaji Nagara, before the date of commencement of the Karnataka State Universities and certain other Law (Second Amendment) Act, 2020 shall, with effect from such date as may be specified by the State Government in this behalf, be deemed to be withdrawn and Government Science College (Autonomous), Nrupathunga Road, Bengaluru previously admitted to the privileges of, or affiliated to, the Bengaluru Central University shall be deemed to be admitted to the privileges of the Nrupathunga University, Bengaluru as constituent college or a schools of the said University."

**(6)** after section 5,the following shall be inserted, namely:-

**"5A. Savings of certain examination.**-Notwithstanding anything contained in the Principal Act or the statutes, ordinances, regulations and rules made there under or any amendment made to the Principal Act, to establish a new university or to discontinue any course of education including distance education of any University, where immediately before the commencement of such Amendment Act,-

(a) any student studying for a degree of the previous University in accordance with the statues, ordinances, regulations and rules in force he may until such examination is provided by the new University, as the case may be admitted to the examination of the previous University and be conferred with the degrees or diplomas for which he qualifies on the result of such examination; and

(b) the Previous University has held any examination, the result of which has been published but the degrees or diplomas relating thereto have not been conferred or issued or the result of any such examination has not been published by the Previous University then such examination shall be deemed to have been held by the previous University."

**(7)** In section 11, in clause (m), after first proviso, the following shall be inserted, namely:-

"Provided further that, in the case of the Nrupathunga University, Bengaluru, the officers of the Universities shall, in addition to the officers specified above except clause (f), also consists of the Directors of schools."

**(8)** In section 14, in sub-section (4),-

(a) after the eighth proviso, the following shall be inserted, namely:-

"Provided also that, notwithstanding anything contrary contained in this section, first Vice-Chancellors of the Maharani Cluster University, Bengaluru and the Mandya University, Mandya shall be appointed by the State Government subject to such terms and conditions as may be specified by it."

(b) after the ninth proviso, the following shall be inserted, namely:-

"Provided also that notwithstanding anything contrary contained in this section, first Vice-Chancellor of any University established under the Principal Act after the commencement of the Karnataka State Universities and certain other law (Second Amendment) Act, 2020 shall be appointed by the State Government subject to such terms and conditions as may be specified by it"

**(9)** After section 14, the following shall be inserted, namely:-

**"14A.Duties of the first Vice-Chancellor.-**(1) It shall be the duty of the first Vice-Chancellor to make arrangements for constituting the Syndicate, Academic Council and other authorities of the newly established university, as the case may be within six months from the date of establishment of the University or such longer period not exceeding one year as the Chancellor may direct.

(2) The Authorities constituted under sub-section (1) shall commence to exercise their powers and perform their functions on such date as the Chancellor may specify in this behalf.

**14B.Transitory provisions on establishment of new university.-** (1) Notwithstanding anything contained in the Principal Act, the first Vice-Chancellors may, with the previous approval of the Chancellor, discharge all or any of the functions of the new University, as the case may be, for the purpose of carrying out the provisions of the Principal Act as amended by the Amendment Act and for that purpose may exercise any power or perform any duty which by the principal Act as amended by the Amendment Act, is to be exercised or performed by any Authority of the University until such Authority comes into existence as provided by the principal Act.

(2) All statues, ordinances, regulations and rules made by the Previous University from which new university is carved out applicable to the colleges or other educational institutions which are deemed to be the constituent colleges or schools of the new University as the case may be, under section 5 of the principal Act shall be deemed to be the Statutes, ordinances, regulations and rules made by the new University as the case may be, and shall continue as such till the new University makes its own statutes, ordinances, regulations and rules:

Provided that, the Vice-Chancellor may with the approval of the Chancellor make such modification and adaptations therein as he may consider necessary."

**(10)** In section 17, for sub-section (1), the following shall be substituted namely:-

"(1) The Registrar shall be a whole time officer of the University. The State Government may appoint an Officer belonging to All India Service or an Officer belonging to Karnataka Administrative Service not below the rank of the Group 'A' officer of the senior scale and above, to be a Registrar of a University."

**(11)** In section 19,-

(i) for sub-section (1), the following shall be substituted namely:-

"(1) The Finance Officer shall be a whole time officer of the University appointed by the State Government from the persons being officers in the cadre of Joint Controller of Karnataka State Audit and Accounts Department or an officer of the rank of Deputy Accountant General having experience in audit, accounting and financial administration. If none of the person is appointed within the time prescribed by the Statutes, the Chancellor may in consultation with the State Government, appoint such other person as he deems fit to be the Finance Officer'; and

(ii) for sub-section (2), the following shall be substituted, namely:-

"(2) The term of office of the Finance Officer shall be three years and the emoluments of the Finance Officer and other terms and conditions shall be as prescribed by the Statutes."

**(12)** In section 21, in sub-section (1), after the fourth proviso, the following shall be inserted, namely:-

"Provided also that, in respect of the Nrupathunga University, Bengaluru, the Dean shall be called as Director of schools and faculty shall be called as schools."

**(13)** In section 28, in sub-section (1), after the third proviso, the following proviso shall be inserted, namely:-

"Provided further that, in the case of the Nrupathunga University, Bengaluru, the Syndicate shall not consist of the members specified in clauses (b), (c), (d), (f), (i), (j) and (k) specified above but shall consists of the Principal Secretary to Government, Higher Education or his nominee not below the rank of Deputy Secretary to Government, two directors of the schools nominated by the Vice-chancellor for a period of one year by rotation according to seniority."

**(14)** In section 29, in sub-section (2), in clause (w), after the proviso, the following shall be inserted, namely:-

"Provided further that, the provisions of clause (j) shall not be applicable in respect of the Nrupathunga University, Bengaluru."

**(15)** In section 30, in sub-section (1), after the third proviso, the following proviso shall be inserted, namely:-

"Provided also that, in the case of the Nrupathunga University, Bengaluru, the Academic Council shall not consist of members specified in clauses (vi), (ix) but

shall consists of the five directors of the schools nominated by the Vice-chancellor by the rotation in the order of seniority, each for a term of two years."

**(16)** In section 31, in sub-section (2), in clause (xx), after the first proviso, the following shall be inserted, namely:-

"Provided further that, in respect of the Nrupathunga University, Bengaluru, the provisions pertaining to affiliation shall not be applicable."

**(17)** In section 34, after sub-section (11), the following shall be inserted, namely:-

"(12) Notwithstanding anything contained in this section, in respect of the Nrupathunga University, Bengaluru, the faculty shall be called as schools and the Deans shall be called as Director of schools."

**(18)** In section 36, in sub-section (2), after the first proviso, the following shall be inserted, namely:-

"Provided further that, in the case of the Nrupathunga University, Bengaluru, in addition to clauses (i), (ii) and (iv) except clauses (iii), (v) and (vi), specified above also consists of two teachers teaching the subjects within concerned departments of studies in the school nominated by the Vice-chancellor."

**(19)** In section 40, in sub-section (1),-

(i) in clause (s),for the words "Mandya unitary University, Mandya" the words "Mandya Univerisity, Mandya or Nrupatunga University, Bengaluru," shall be substituted;

(ii) in clause (t),for the words "Mandya unitary University, Mandya" the words "Mandya Univeristy, Mandya or Nrupatunga University, Bengaluru," shall be substituted; and

(iii) in clause (t), after the proviso, the following proviso shall be inserted, namely:-

"Provided further that in the case of the Nrupathunga University, Bengaluru, clause (g), shall not be applicable."

**(20)** In section 41, after sub-section (7), the following shall be inserted, namely:-

"(8) Notwithstanding anything contained in this section, the Syndicate shall not make or adopt any new statute or amend, modify or repeal any statutes affecting the objectives of the University"

**(21)** In section 42, in sub-section (1), in clause (n), after the proviso, the following shall be inserted, namely:-

"Provided further that, in the case of the Nrupathunga University, Bengaluru, clause (j), shall not be applicable."

**(22)** In section 46, after sub-section (3), the following shall be inserted, namely:-

"(4) No part of the income of the University shall be utilised directly or in directly for the benefit of any Officer or Authority of the University or any other person who has made substantial contribution to it or of any relative of such Officer or Authority or person or any relative of such officer or Authority or person has a substantial interest"

**(23)** in section 47,-

(i) in sub-section (3), for the words "Controller of State Accounts", the words "Principal Director, Karnataka State Audit and Accounts Department" shall be substituted.

(ii) after sub-section (4), the following shall be inserted, namely:-

"(5) The University shall, where its total income as computed under the Income Tax Act, 1961(Central Act 43 of 1961) without giving effect to the provisions of sections 11 and 12 of that Act exceeds the maximum amount which is not chargeable to income-tax in any previous year, get its accounts for that year audited by an accountant as defined in the Explanation to sub-section (2) of section 288 of the Income Tax Act, 1961 and furnish along with its return of income for the relevant assessment year the report of such audit in the prescribed form duly signed and verified by such accountant and setting forth such particulars as may be prescribed, in accordance with clauses (b) and (ba) of sub-section (1) of section 12A of the Income Tax Act, 1961.

(6) The University shall utilize its income and movable and immovable property only of the furtherance of its objects, shall not invest or deposit any income accumulated or set apart for application to charitable purpose in India in any form or mode other than those specified in sub-section (3) of section 11 of the Income Tax Act, 1961 and shall not distribute its income or property to any person by way of profit, dividend and interest or in any other manner".

**(24)** After section 58A, the following shall be inserted, namely:-

"**58B. Application of provision of sections 59 to 67.-** Notwithstanding anything contained in this Act, the provisions of sections 59 to 67 shall not be applicable to the Nrupathunga University, Bengaluru"

**(25)** After section 84, the following shall be inserted, namely:-

"**84A. Dissolution or winding up of the University.-** In the event of dissolution or winding up of the University, the assets remaining as on the date of dissolution shall under no circumstances be distributed among the officers of the University or members of the Syndicate or Finance Committee or among any person having substantial interest of their relative, but the same shall be transferred to another University whose objects are similar to that of this University".

**(26) Substitution of expression.-** For the words "Bengaluru Central University" wherever they occur, the words "Bengaluru City University" shall be substituted.

**3. Amendment of Karnataka Act 11 of 2012.**-In the Karnataka Janapada Vishwavidyalaya Act, 2011 (Karnataka Act 11 of 2012), in section 46, in sub-section(3), for the words "Controller of State Accounts", the words "Principal Director, Karnataka State Audit and Accounts Department" shall be substituted.

**4. Removal of difficulties**.- If any difficulty arises in giving effect to the provisions of the Karnataka State Universities and certain other Law (Second Amendment) Act, 2020 the State Government may, by order published in the Official Gazette, make such provision not inconsistent with the provisions of the Karnataka State Universities and certain other Law (Second Amendment) Act, 2020 as may appear to it necessary or expedient for the purposes of removing the difficulty:

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



Provided that no such orders shall be made after the expiry of the period of two years from the date of commencement of the Karnataka State Universities and certain other Law (Second Amendment) Act, 2020

**5.Repeal and Savings,-** (1) The Karnataka State Universities and Certain other Law (Second Amendment) Ordinance, 2020 (Karnataka Ordinance 22 of 2020) is hereby repealed.

(2) Notwithstanding such repeal, anything done or any action taken under the principal Act, as amended by the said Ordinance, shall be deemed to have been done or taken under the Principal Act, as amended by this Act.

The above translation of **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ. 2020 (2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 54)** be published in the official Gazette under clause (3) of Article 348 of the Constitution of India.

**VAJUBHAI VALA**
**GOVERNOR OF KARNATAKA**
By Order and in the name of
the Governor of Karnataka,

**(K.DWARAKANATH BABU)**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE